ಸರ್ಕಾರವು ಪ್ರಕಟಿಸಿರುವ ಅಲ್ಪ ಸಂಖ್ಯಾತರ ಕ್ಷೇತ್ರದ ಪಟ್ಟಿ-1

| | | |
|---|---|---|
| 1) | ಬೆಂಗಳೂರು ಜಿಲ್ಲೆ | ತಮಿಳು ಮತ್ತು ಉರ್ದು |
| 2) | ಬೆಳಗಾವಿ ಜಿಲ್ಲೆ | ಮರಾಠಿ |
| 3) | ಬಳ್ಳಾರಿ ಜಿಲ್ಲೆ | ತೆಲುಗು ಮತ್ತು ಉರ್ದು |
| 4) | ಬೀದರ್ ಜಿಲ್ಲೆ | ಉರ್ದು ಮತ್ತು ಮರಾಠಿ |
| 5) | ಬಿಜಾಪುರ ಜಿಲ್ಲೆ | ಉರ್ದು |
| 6) | ಚಿತ್ರದುರ್ಗ ಜಿಲ್ಲೆ | ತೆಲುಗು |
| 7) | ದಕ್ಷಿಣ ಕನ್ನಡ ಜಿಲ್ಲೆ | ಮಲಿಯಾಳಂ |
| 8) | ಗುಲ್ಬರ್ಗಾ ಜಿಲ್ಲೆ | ತೆಲುಗು ಮತ್ತು ಉರ್ದು |
| 9) | ಕೊಡಗು ಜಿಲ್ಲೆ | ಮಲಿಯಾಳಂ |
| 10) | ಕೋಲಾರ ಜಿಲ್ಲೆ | ತಮಿಳು, ತೆಲುಗು ಮತ್ತು ಉರ್ದು |
| 11) | ಮೈಸೂರು ಜಿಲ್ಲೆ | ತಮಿಳು |
| 12) | ರಾಯಚೂರು ಜಿಲ್ಲೆ | ತೆಲುಗು ಮತ್ತು ಉರ್ದು |
| 13) | ಶಿವಮೊಗ್ಗ ಜಿಲ್ಲೆ | ಉರ್ದು |
| 14) | ತುಮಕೂರು ಜಿಲ್ಲೆ | ತೆಲುಗು |
| 15) | ಉತ್ತರ ಕನ್ನಡ ಜಿಲ್ಲೆ | ಉರ್ದು ಮತ್ತು ಮರಾಠಿ |
| 16) | ಧಾರವಾಡ ಜಿಲ್ಲೆ | ಉರ್ದು |

ವಿಷಯ :- ಬೆಂಗಳೂರು ನಗರದ ಉದ್ಯಾನವನಗಳಲ್ಲಿ ಭಾನುವಾರದಂದು ನಗರ ಪಾಲಿಕೆಯವರಿಂದ ಆರ್‌ಕೆಸ್ಟ್ರಾ ವಾದ್ಯಗೋಷ್ಠಿ ಮತ್ತು ಇತರೆ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 630 (830)

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) :- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದ ಕಬ್ಬನ್ ಪಾರ್ಕ್ ಚಿಕ್ಕಲಾಲ್‌ಬಾಗ್, ಲಾಲ್‌ಬಾಗ್ ಮತ್ತು ಇತರೆ ಉದ್ಯಾನವನಗಳಲ್ಲಿ ಭಾನುವಾರಗಳು ಮತ್ತು ಇತರೆ ರಜಾ ದಿನಗಳಲ್ಲಿ ಬೆಂಗಳೂರು ನಗರ ಪಾಲಿಕೆಯು ಆರ್‌ಕೆಸ್ಟ್ರಾ ವಾದ್ಯಗೋಷ್ಠಿ ಮತ್ತು ಇತರೆ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದೆಯೇ ?

ಆ) ಇಲ್ಲದಿದ್ದರೆ, ಸ್ಥಳೀಯ ಕಲಾವಿದರಿಗೆ ಉತ್ತೇಜನ ಕೊಡುವ ಸಲುವಾಗಿ ಮತ್ತು ಜನರಿಗೆ ಮನರಂಜನೆಯನ್ನು ಒದಗಿಸುವ ಸಲುವಾಗಿ ವಾದ್ಯ ಸಂಗೀತಗಾರರು ದೊರೆಯುವ ಬೆಂಗಳೂರು ನಗರದ ಎಲ್ಲಾ ಉದ್ಯಾನವನಗಳಲ್ಲೂ ಭಾನುವಾರ ಮತ್ತು ಇತರ ರಜಾ ದಿನಗಳಲ್ಲಿ ಆ ರೀತಿಯ ಕಾರ್ಯಕ್ರಮಗಳನ್ನು ಏರ್ಪಡಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :-

ಅ) ಇಲ್ಲ.

ಆ) ಆ ರೀತಿಯ ಪ್ರಸ್ತಾವನೆ ಯಾವುದೂ ಸರ್ಕಾರದ ಮುಂದೆ ಇರುವುದಿಲ್ಲ.

ವಿಷಯ :- ನಗರ ಪಾಲಿಕೆಯಲ್ಲಿ ಬಾಕಿ ಉಳಿದಿರುವ ಕಟ್ಟಡ ನಕ್ಷೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 632 (998)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) :- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರ ಪಾಲಿಕೆಯಲ್ಲಿ ಬಾಕಿ ಉಳಿದಿರುವ ಕಟ್ಟಡದ ನಕ್ಷೆಗಳ ಸಂಖ್ಯೆ ಎಷ್ಟು ?

ಆ) ಕಳೆದ ಮೂರು ವರ್ಷಗಳಲ್ಲಿ ಅಂದರೆ ಮಾರ್ಚ್ 90 ರ ವರೆಗೆ ಕಟ್ಟಡಕ್ಕೆ ಮಂಜೂರಾತಿ ನೀಡಿರುವ ನಕ್ಷೆಗಳ ಸಂಖ್ಯೆ ಎಷ್ಟು ? (ವಾಣಿಜ್ಯ/ವಸತಿ ಮತ್ತು ಇತರೆ ವಿಘಟನೆ ಮಾಹಿತಿಯನ್ನು ಒದಗಿಸುವುದು)